# ಸಹಸ್ರ ಸವಾಲುಗಳ ಗೆದ್ದ ಸಾಧನೆ!

**ಭಾರತವೀಗ ಬಾಹ್ಯಾಕಾಶ ಕ್ಷೇತ್ರದಲ್ಲಿ ಸಮರ್ಥ ಉದ್ಯಮಿ. ಕಳೆದ ತಿಂಗಳು ಶ್ರೀಹರಿಕೋಟಾದಿಂದ ಹಾರಿಬಿಟ್ಟ 20 ಉಪಗ್ರಹಗಳಲ್ಲಿ ನಮ್ಮದು ಮಾತ್ರವಲ್ಲ, ಅಮೆರಿಕದ 13, ಕೆನಡಾದ 2 ಹಾಗೂ ಜರ್ಮನಿ ಮತ್ತು ಇಂಡೋನೇಷ್ಯಾದ ತಲಾ ಒಂದು ಉಪಗ್ರಹಗಳೂ ಇದ್ದವು!**

**■ ಸುಮಂಗಲಾ ಎಸ್. ಮುಮ್ಮಿಗಟ್ಟಿ**




ಚಿತ್ರಕೃಪೆ: ಇಸ್ರೊ

ಇಡಿಯ ಜಗತ್ತು ಭಾರತದತ್ತ ನೋಡುತ್ತಿತ್ತು. ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಲಾಂಚ್ ಪ್ಯಾಡ್‌ನಿಂದ ಪಿ.ಎಸ್.ಎಲ್.ವಿ. (ಪೋಲಾರ್ ಸೆಟಲೈಟ್ ಲಾಂಚ್ ವೆಹಿಕಲ್) ರಾಕೆಟ್ ಪ್ಯಾಡ್‌ನಿಂದ ಆಗಸಕ್ಕೆ ಚಿಮ್ಮುತ್ತಿದ್ದಂತೆಯೇ ಎಲ್ಲರ ಹೃದಯದ ಬಡಿತ ಹೆಚ್ಚಾಯಿತು. ಬರಿಯ ಕಣ್ಣಿಗೆ ಕಾಣದಂತಾದ ರಾಕೆಟ್ ಕೇವಲ ತಾನು ಸಾಗಿಹೋದ ಹಾದಿಯಲ್ಲಿ ಹೊಗೆಯ ಬಿಳಿಯ ಜಾಡನ್ನು ಮಾತ್ರ ಉಳಿಸಿತ್ತು. ಇತ್ತ ಕಂಟ್ರೋಲ್ ರೂಮಿನ ವಿಜ್ಞಾನಿಗಳ ಮುಖದ ಭಾವ ಕ್ಷಣ ಕ್ಷಣಕ್ಕೆ ಬದಲಾಗುತ್ತಿತ್ತು. ರಾಕೆಟ್‌ನ ಒಂದೊಂದೇ ಭಾಗಗಳು ನಿಯೋಜಿಸಿದಂತೆಯೇ ಬೇರ್ಪಡುತ್ತಾ, ರಾಕೆಟ್ ಮೇಲೆ ಮೇಲೆ ಸಾಗಿದಂತೆ ಸಮಾಧಾನದ ನಿಟ್ಟುಸಿರು ಹೊರ ಹೊಮ್ಮುತ್ತಿತ್ತು. ಅತೀ ಮುಖ್ಯವಾದ ನಾಲ್ಕನೇ ಭಾಗ ಬಂದೇಬಿಟ್ಟಿತು, ಕ್ಷಣ ಕಾಲ ಉಸಿರೂ ನಿಂತಿತ್ತು! 'ಹೋ...!' ಅದೂ ಬೇರ್ಪಟ್ಟಿತು. ಎಲ್ಲೆಡೆ ಹರ್ಷೋದ್ಗಾರ, ಕರತಾಡನ! ಜಗತ್ತಿನ ಇತರ ರಾಷ್ಟ್ರಗಳು ಅಚ್ಚರಿಯಿಂದ ಗಮನಿಸಿದವು. 'ನಂಬಲು ಸಾಧ್ಯವೇ..' ಎಂದವರೂ ಉಂಟು. ಭಾರತ ಇತಿಹಾಸವನ್ನು ಸೃಷ್ಟಿಸಿತ್ತು.

–ಇದು ನಡೆದದ್ದು ಜೂನ್ 22ರಂದು ಬೆಳಿಗ್ಗೆ 9.26ಕ್ಕೆ ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ಇಸ್ರೋ' ನಡೆಸಿದ ಈ ಉಡಾವಣೆ ಸಾಧಾರಣ ಉಡಾವಣೆಯಾಗಿರಲಿಲ್ಲ. ಪಿ.ಎಸ್.ಎಲ್.ವಿ. ತಾನು ಹೊತ್ತೊಯ್ದಿದ್ದ ಎಲ್ಲ 20 ಉಪಗ್ರಹಗಳನ್ನು

(57ನೇ ಪುಟ ನೋಡಿ)